**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 742/2017**

ಚಾಸಾಃ 1
ಫ್ರಾಸಾಃ 1

**ದಿನಾಂಕಃ 03-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ರೇಣುಕಾಪ್ರಸಾದ್ |
| ತಂದೆಯ/ಗಂಡನ ಹೆಸರು | ಃ | ಬಸಪ್ಪ |
| ವಯಸ್ಸು | ಃ | 50 ವರ್ಷ |
| ಉದ್ಯೋಗ | ಃ | ಡ್ರೈವರ್ |
| ವಾಸ ಸ್ಥಳ | ಃ | ಕೆ ಬಿ ಕ್ರಾಸ್ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ನ್ಯಾಯೂಲಯದ ಮುಂದೆ ಇರುವ ಆರೋಪಿಯನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಎರಡು ದಾಖಲಾತಿಗಳನ್ನು ತೋರಿಸಿ ಅದರಲ್ಲಿ ಅವ ಸಹಿ ಇದೆ ಎಂದು ಗುರುತಿಸಿರುತ್ತಾರೆ ಅದು ದೂರು ಮತ್ತು ಸ್ಥಳದ ಪಂಚನಾಮೆಯಾಗಿರುತ್ತದೆ ಅದನ್ನು ನಿಪಿ-1 ಮತ್ತು 2 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಮತ್ತು ನಿಪಿ-2(ಎ) ಎಂದು ಗುರುತಿಸಲಾಗಿದೆ. ನಿಪಿ-1 ಮತ್ತು 2 ಕ್ಕೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಯಾವ ವಿಚಾರಕ್ಕೆ ಎಂದು ನನಗೆ ಗೊತ್ತಿಲ್ಲ ಆದರೆ ಪೊಲೀಸರ ಕೋರಿಕೆ ಮೇರೆಗೆ ಸಹಿಯನ್ನು ಹಾಕಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ **12-11-2016** ರಂದು ಸಂಜೆ **7** ಗಂಟೆಗೆ ನನ್ನ ಶಿಫ್ಟ್ ಕಾರಾದ ಕೆಎ-**02**-ಎನ್‌ಜಿ-**635** ಬೆಂಗಳೂರಿಗೆ ಚಾಲನೆ ಮಾಡಿ ರಾತ್ರಿ **11** ಗಂಟೆ ಸಮಯಕ್ಕೆ ಕೆ ಬಿ ಕ್ರಾಸ್ ಹತ್ತಿರ ಹಿಂಡಿಸ್ಕೆರೆ ಗ್ರಾಮದ ಹತ್ತಿರ ಎನ್ ಹೆಚ್ **206** ರಸ್ತೆಯಲ್ಲಿ ಬರುತ್ತಿರುವಾಗ ಅಪಘಾತವಾಗಿ ರಾತ್ರಿ ಸುಮಾರು **11-30** ಗಂಟೆ ಸಮಯಕ್ಕೆ ನನ್ನ ಅಣ್ಣನ ಮಗ ಕೆ ಬಿ ಕ್ರಾಸ್ ನಲ್ಲಿದ್ದ ನನಗೆ ಪೋನ್ ಮಾಡಿ ಅಪಘಾತವಾದ ವಿಚಾರವನ್ನು ತಿಳಿಸಿರುತ್ತಾನೆ ಎನ್ನುತ್ತಾರೆ. ನಾನು ಸ್ಥಳಕ್ಕೆ ಹೋಗಿ ನೋಡಲಾಗಿ ತಿಪಟೂರು ಕಡೆಯಿಂದ ಕೆಎ-**44**-ಕೆ-**8072** ಶ್ರೀ ಶಬರಿ ಟ್ರಾನ್ಸ್ ಪೋರ್ಟಿಗೆ ಸೇರಿದ ಚಾಲಕನು ತನ್ನ ಅತೀವೇಗ ಮತ್ತು ಅಜಾಗರೂಕತೆಯಿಂದ ಓಡಿಸಿಕೊಂಡು ಬಂದು ಕೆಎ-**02**-ಎನ್‌ಜಿ-**635** ಕಾರಿಗೆ ಢಿಕ್ಕಿ ಪಡಿಸಿದ ಪರಿಣಾಮ ಕೆ.ಎಂ ಸಿದ್ಧರಾಜು ರವರು ಸ್ಥಳದಲ್ಲಿ ಮೃತಪಟ್ಟಿರುತ್ತಾರೆ ಕುಸುಮ ರವರು ಚಿಕ್ಕನಾಯಕನಹಳ್ಳಿ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಮಾರ್ಗದ ಮಧ್ಯದಲ್ಲಿ ಮೃತಪಟ್ಟಿರುತ್ತಾರೆ ಅವರ ಹೆಂಡತಿ ಕಾವ್ಯ ಮತ್ತು ಅವರ ಮಗ ನಿಶಾಂತ್ ಗೆ ತಲೆಗೆ ಪೆಟ್ಟಾಗಿ ಕಳೆಗಡೆ ಬಿದ್ದಿರುವುದರಿಂದ ಅವನ್ನು ಚಿಕಿತ್ಸೆಗೋಸ್ಕರ ಕುಮಾರ್ ಆಸ್ಪತ್ರೆಗೆ ತಿಪಟೂರಿಗೆ ಸೇರಿಸಿರುತ್ತೇವೆ ಮತ್ತು ಹೆಚ್ಚಿನ ಚಿಕಿತ್ಸೆಗೋಸ್ಕರ ಬೆಂಗಳೂರಿನಲ್ಲಿರುವ ಸ್ಪರ್ಷ ಆಸ್ಪತ್ರೆಗೆ ದಾಖಲಿಸಿದ್ದಾರೆ ಈ ವಿಚಾರವನ್ನು ನನಗೆ ನನ್ನ ಅಣ್ಣನ ಮಗನಾದ ಅಮಿತ್ ರವರು ಪೋನ್ ನಲ್ಲಿ ಹೇಳಿರುತ್ತಾರೆ ನಂತರ ನಾನು ಈ ವಿಚಾರವಾಗಿ **2** ದಿನ ಬಿಟ್ಟು ಪೊಲೀಸರಿಗೆ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ಆರೋಪಿಯನ್ನು ನೋಡಿರುವುದಿಲ್ಲ ಮತ್ತು ಅವರ ತಪ್ಪಿನಿಂದ ನಿಪಿ-**1** ರಲ್ಲಿ ಹೇಳಿರುವಂತಹ ಅಪಘಾತವಾಗಿದೆ ಎಂದು ನನಗೆ ಹೇಳಲು ಸಾಧ್ಯವಿಲ್ಲ.

ದಿಃ **13-11-2016** ರಂದು ಮಧ್ಯಾಹ್ನ **1-30** ಗಂಟೆಯಿಂದ **2-30** ಗಂಟೆವರೆಗೆ ಅಪಘಾತವಾದ ಸ್ಥಳದಲ್ಲಿ ನಿಪಿ-**2** ಕ್ಕೆ ಸಹಿ ಮಾಡಿರುತ್ತೇವೆ ಎಂದರೆ ಸಾಕ್ಷಿ ನಾನು ಮಹಜರ್ ಮಾಡಿರುವ ಬಗ್ಗೆ ನಾನು ನೋಡಿರುವುದಿಲ್ಲ ಎನ್ನುತ್ತಾರೆ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಂಬಿ ಕೆ ವಕೀಲರಿಂದಃ

ನನ್ನ ಅಣ್ಣನ ಮಗನಾದ ಅಮಿತ್ ರವರು ಅಪಘಾತ ಎಂದು ಹೇಳಲಾದ ದಿನ ಕೆ ಬಿ ಕ್ರಾಸ್ ನಲ್ಲಿ ಇದ್ದರು. ಅಮಿತ್ ರವರಿಗೆ ಅಪಘಾತ ವಿಚಾರವಾಗಿ ದೂರನ್ನು ಕೊಡಲು ಏನಾದರೂ ತೊಂದರೆ ಇತ್ತ ಎಂದರೆ ಸಾಕ್ಷಿ ನನಗೆ 2 ದಿನ ಬಿಟ್ಟು ಕೊಡಿ ಎಂದು ನನಗೆ ತಿಳಿಸಿರುತ್ತಾರೆ. ನಿಪಿ-1 ಕ್ಕೆ ಅಮಿತ್ ರವರು ಸಹಿ ಮಾಡಿ ಎಂದು ನನಗೆ ಹೇಳಿರುವ ಮೇರೆಗೆ ಸಹಿಯನ್ನು ಮಾಡಿರುತ್ತೇನೆ.

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**
**ತಿಪಟೂರು**

**ಸಿ.ಸಿ ನಂ. 742/2017**

ಚಾಸಾಃ 3
ಫ್ರಾಸಾಃ 2

**ದಿನಾಂಕಃ 03-08-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಮಂಜುನಾಥ |
| ತಂದೆಯ/ಗಂಡನ ಹೆಸರು | ಃ | ಚನ್ನಪ್ಪ |
| ವಯಸ್ಸು | ಃ | 48 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಗುಡ್ಡದಪಾಳ್ಯ |

**ಮುಖ್ಯ ವಿಚಾರಣೆ ಎಪಿಪಿಯವರಿಂದಃ**

ಈಗಾಗಲೇ ಗುರುತಿಸಿರುವ ಸ್ಥಳ ಪಂಚನಾಮೆ ನಿಪಿ-2 ರಲ್ಲಿ ಇರುವ ಸಾಕ್ಷಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಗಿದೆ ಮತ್ತು ಇನ್ನೊಂದು ದಾಖಲಾತಿಯನ್ನು ತೋರಿಸಿ ನಾನು ಆ ಸಹಿಯನ್ನು ಠಾಣೆಯಲ್ಲಿ ಮಾಡಿರುತ್ತೇನೆ ಅದು ಅಮಾನತ್ತು ಪಂಚನಾಮೆಯಾಗಿರುತ್ತದೆ ಅದನ್ನು ನಿಪಿ-3 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಗಿದೆ. ನಿಪಿ-3(ಎ) ನ್ನು ಠಾಣೆಯಲ್ಲಿ ಮಾಡಿರುತ್ತೇನೆ. ನಿಪಿ-2 ಮತ್ತು 3 ರಲ್ಲಿರುವ ದಾಖಲಾತಿಗಳಲ್ಲಿ ಇರುವ ವಿಷಯಗಳು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸಸಅ ರವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

ಪಾಟೀ ಸವಾಲು ಸರ್ಕಾರಿ ಅಭಿಯೋಜಕರವರಿಂದಃ

ನಾನು ದಿಃ **13-11-2016** ರಂದು ಮಧ್ಯಾಹ್ನ **1-30** ರಿಂದ **2** ಗಂಟೆವರೆಗೆ ಹಿಂಡಿಸ್ಕೆರೆ ಗ್ರಾಮದ ಬಳಿ ಎನ್ ಹೆಚ್ **206** ರಸ್ತೆಯ ಬಳಿ ಕೆಎ-**14**-ಎ-**8072** ಮತ್ತು ಕೆಎ-**02**-ಎನ್ ಜಿ-**635** ಶಿಫ್ಟ್ ಕಾರಿಗೆ ಸಂಬಂಧಪಟ್ಟಿರುವ ಅಪಘಾತ ಆಗಿರುವ ವಿಚಾರವಾಗಿ ಸದರಿ ಸ್ಥಳದಲ್ಲಿ ನಿಪಿ-**2** ಮತ್ತು ವಾಹನಗಳನ್ನು ಜಪ್ತು ಮಾಡುವ ಸಂಬಂಧ ಮಧ್ಯಾಹ್ನ **3-30** ರಿಂದ **6-30** ರವರೆಗೆ ಪೊಲೀಸ್ ಠಾಣೆ ಆವರಣದಲ್ಲಿ ನಿಪಿ- **3** ನ್ನು ಬರೆದಿದ್ದಾರೆ ಎಂದರೆ ಸರಿಯಲ್ಲ. ನಿಪಿ-**2** ಮತ್ತು **3** ಕ್ಕೆ ನನ್ನ ಜೊತೆ ಬೇರೆ ಯಾರೂ ಸಹಿ ಮಾಡಿರುವುದಿಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದು ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿತಾ ಇದ್ದೀನಿ ಎಂದರೆ ಸರಿಯಲ್ಲ.

ಪಾಟೀ ಸವಾಲು ಶ್ರೀ ಎಂಬಿ ಕೆ ವಕೀಲರಿಂದಃ ಇರುವುದಿಲ್ಲ

ಮರು ವಿಚಾರಣೆ - ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ
ತಿಪಟೂರು.